CC No.01/2024

DW-1

ದಿನಾಂಕಃ 03-09-2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀಸವಾಲುಃ ದೂರುದಾರರ ಪರ ಶ್ರೀ. ಬಿ ಎಸ್ ಜಿ ವಕೀಲರಿಂದ.**

ದೂರುದಾರರು ನನಗೆ ನಿಪಿ-3 ರಂತೆ ನೀಡಿದ ನೋಟೀಸನ್ನು ನಾನು ನಿಪಿ-5 ರಂತೆ ಸ್ವೀಕರಿಸಿರುತ್ತೇನೆ ಎಂದರೆ ಸರಿ. ಸಾಕ್ಷ್ಯ ಪ್ರಮಾಣ ಪತ್ರದ ಮೇಲಿರುವ ಸಹಿ ನನ್ನದೇ ಎಂದರೆ ಸರಿ. ನಿಪಿ-1 ರ ಮೇಲೆ ಇರುವ ಸಹಿ ನನ್ನದೇ ಎಂದರೆ ಸರಿ. ದೂರುದಾರರು ಮತ್ತು ನನ್ನ ನಡುವೆ ಹಣದ ವ್ಯವಹಾರ ಆಗಿರುತ್ತದೆ ಎಂದರೆ ಸರಿಯಲ್ಲ. ಹಾಗೇ ಹಣ ಪಡೆದುಕೊಂಡ ಬಗ್ಗೆ ನಾನು ಕೈಗಡ ಪತ್ರ ಬರೆದುಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ನಾನು ದೂರುದಾರರಿಗೆ ಹಣ ನೀಡಬೇಕಾಗುತ್ತದೆ ಎಂದು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಈಗ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-1 ನ್ನು ನಾನು ಪಡೆದುಕೊಂಡ ಹಣದ ತಿರುವಳಿಗಾಗಿ ನೀಡಿದ್ದು ಇರುತ್ತದೆ ಎಂದರೆ ಸರಿಯಲ್ಲ. ನಿಪಿ-1 ಚೆಕ್ಕನ್ನು ನೀಡಿದ್ದರೂ ಈಗ ಅದನ್ನು ನೀಡಿಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದೂರುದಾರರಿಗೆ ತೊಂದರೆ ನೀಡುವ ಉದ್ದೇಶದಿಂದ ನಾನು ಅವರಿಗೆ ಹಣ ನೀಡದೇ ಮೋಸ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಚೆಕ್ಕಿನಲ್ಲಿ ನಮೂದಿಸಿದ ಹಣ ದೂರುದಾರರಿಗೆ ನೀಡಬೇಕಾಗುತ್ತದೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

ಓ.ಹೆ.ಕೆ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಮ್ ಎಫ್ ಸಿ, ಶಿಗ್ಗಾಂವ.